ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. **685/2022**

ಸಿ ಡಬ್ಲ್ಯೂ-**1**
ಪಿ ಡಬ್ಲ್ಯೂ- **1**

ದಿಃ07-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಅಬ್ದುಲ್ ಗಣಿ ಖಾಜಿ |
| ತಂದೆಯ ಹೆಸರುಃ | ನಿಜಾಮುದ್ದೀನ್ |
| ವಯಸ್ಸುಃ | **44** ವರ್ಷ |
| ಉದ್ಯೋಗಃ | ಕೂಲಿ |
| ವಿಳಾಸಃ | ಪಾಳಾ, ಮುಂಡುಗೋಡ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ

ದಿಃ19-07-2022 ರಂದು ಬೆಳಿಗ್ಗೆ ಸುಮಾರು 6.00 ಗಂಟೆಗೆ ನಾನು ಯಲ್ಲಾಪೂರದಿಂದ ಅಂಕೋಲಾಕ್ಕೆ ಹೊಗುತ್ತಿರುವಾಗ ರಾಮನಗುಳಿಯ ದುಗ್ಗನಬೈಲ್ ಹತ್ತಿರ ನಮ್ಮ ಅಶೋಕ ಲೈಲ್ಯಾಂಡ್ ವಾಹನ ಸಂಖ್ಯೆಃ ಕೆ ಎ 31 ಎ 0905 ನೇದ್ದು ಹೋಗುತ್ತಿರುವಾಗ ಮುಂದಿನಿಂದ ಕಂಟೇನರ್ ಲಾರಿ ಸಂಖ್ಯೆಃ ಕೆ ಎ 01 ಎ ಎಲ್ 4176 ನೇದ್ದು ಓವರ ಟೇಕ್ ಮಾಡಿಕೊಂಡು ಅಂಕೋಲಾದಿಂದ ಯಲ್ಲಾಪುರ ಕಡೆಯಿಂದ ಬಂದು ನಮ್ಮ ವಾಹನದ ಮುಂದಿನ ಗ್ಲಾಸಿಗೆ ಡ್ರೈವರಿಗೆ ಬಂದು ಡಿಕ್ಕಿ ಹೊಡೆಯಿತು. ನಾನು ಹುಬ್ಬಳ್ಳಿ-ಕಾರವಾರ ಬಸ್ಸಿನಲ್ಲಿ ನಮ್ಮ ವಾಹನದ ಹಿಂದೆ ನಾನು ಹೋಗುತ್ತಿದ್ದು, ಅಪಘಾತವನ್ನು ನೋಡಿ ನಾನು ಕೆಳಗೆ ಇಳಿದು ಬಂದು, ಡ್ರೈವರ್ ಗೆ ಹೋಗಿ ನೋಡಿದಾಗ ತಲೆಗೆ, ಕೈಗೆ, ಕಣ್ಣಿಗೆ ಪೆಟ್ಟಾಗಿದ್ದು, ಸ್ಥಳದಲ್ಲಿಯೇ ಮೃತನಾಗಿರುತ್ತಾನೆ. ಅಪಘಾತ ಮಾಡಿದ ವ್ಯಕ್ತಿಯು ಸ್ಥಳದಲ್ಲಿ ಇಲ್ಲದೇ ಓಡಿ ಹೋಗಿದ್ದು, ಅವರ ಹೆಸರನ್ನು ಅಲ್ಲಿ ಇದ್ದ ಜನರನ್ನು

ಕೇಳಿದಾಗ ಮತ್ತು ಅವರಿಗೆ ಸಂಬಂಧಪಟ್ಟ ಮನುಷ್ಯರು ಇನ್ನೊಬ್ಬರು ಇದ್ದು ಅವರನ್ನು ಕೇಳಿದಾಗ ಆತನ ಹೆಸರು ಮೇಘಾ ಸಿಂಗ್ ಎಂದು ತಿಳಿದು ಬಂದಿರುತ್ತದೆ. ನಂತರ ನಾನು ಠಾಣೆಯಲ್ಲಿ ಆತನನ್ನು ನೋಡಿರುತ್ತೇನೆ. ಘಟನಾ ಸ್ಥಳದಲ್ಲಿ ನೋಡಿರುವುದಿಲ್ಲ.

2. ನಂತರ ಬೆಳಿಗ್ಗೆ ಸುಮಾರು 9.15 ಗಂಟೆಗೆ ದೂರನ್ನು ಕೊಟ್ಟಿರುತ್ತೇನೆ. ದೂರಿನ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ದೂರನ್ನು ನಿಪಿ-1 ದೂರಿನ ಮೇಲಿರುವ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ದಿಃ19-07-2022 ರಂದು ಅದೇ ದಿನ ಪಂಚನಾಮೆಯನ್ನು ಮಧ್ಯಾಹ್ನ ಸುಮಾರು 1.40 ರಿಂದ 2.30 ಗಂಟೆಯವರೆಗೆ ಜರುಗಿಸಲಾಯಿತು. ಪಂಚನಾಮೆ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪೋಟೋವನ್ನು ತೆಗೆದುಕೊಂಡು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ಕಚ್ಚಾ ನಕಾಶೆಯನ್ನು ಸಾಕ್ಷಿಯು ಗುರುತಿಸುತ್ತಾರೆ. ಸಾಕ್ಷಿಯು ಪೊಟೋಗಳನ್ನು ಗುರುತಿಸಿದ್ದು, ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ಸುಮಾರು ಮಧ್ಯಾಹ್ನ 3.00 ಗಂಟೆಗೆ ಅಂಕೋಲಾ ಸರಕಾರಿ ಆಸ್ಪತ್ರೆಗೆ ಬಂದು, ಶವಗಾರದ ಹತ್ತಿರ ಪೊಟೋವನ್ನು ತೆಗೆದಿರುತ್ತಾರೆ. ಪೋಟೋವನ್ನು ತಕರಾರಿಗೆ ಒಳಪಟ್ಟು ನಿಪಿ-5 ಎಂದು ಗುರುತಿಸಲಾಯಿತು. ಮತ್ತೆ ಏನನ್ನೂ ಮಾಡಿರುವುದಿಲ್ಲ.

<u>ಪಾಟೀ ಸವಾಲನ್ನು</u> ಆರೋಪಿತ ಪರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.